# Title for Kannada content: Nature's Gift: Exploring the Healing Powers of the Ashoka Tree

ಈ ವಾರದ ವಿಕ್ರಮ ಪತ್ರಿಕೆಯಲ್ಲಿ “ಸೀತಾ ಅಶೋಕ” ಮರದ ಕುರಿತು ಬರೆದ ಲೇಖನ ಪ್ರಕಟವಾಗಿದೆ. ಈ ವೃಕ್ಷದ ಕೆಳಗೆ ಕಳಿತರೂ ಸಾಕು ಬಹಳ ಕಾಯಿಲೆಗಳು ಗುಣವಾಗುತ್ತದೆ. ಲೇಖನ ಓದಿ ಇತತರೊಂದಿಗೆ ಹಂಚಿಕೊಳ್ಳಿ ಹಾಗೆ ಈ ಮುಂಗಾರಿನಲ್ಲಿ ಇಂತಹ ಗಿಡಗಳನ್ನು ನೀವು ನೆಡುತ್ತೀರೆಂದು ಆಶಿಸುತ್ತೇನೆ.

- ಕೆಲದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಡಿಕೆ ಮರಗಳು ಜಗತ್ತಿನ ಅತಿ ಹೆಚ್ಚು ಆಮ್ಲಜನಕ ನೀಡುವ ಸಸ್ಯಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ ಮತ್ತು ಹೆಚ್ಚು ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಅಮ್ಲಜನಕದ ಪ್ರಮಾಣವೂ ಹೆಚ್ಚಿರುತ್ತದೆ ಎಂದು ಹೇಳುವ ಸಂದೇಶಗಳು ವಾಟ್ಸಾಪ್ ಮತ್ತು ಫೇಸ್ಬುಕ್ನಲ್ಲಿ ಪ್ರಚಲಿತದಲ್ಲಿದೆ. ಇದಕ್ಕೆ ಮತ್ತಷ್ಟು ಪುಷ್ಟಿ ನೀಡುವಂತೆ ಕಳೆದ ವಾರದ ವಿಜಯವಾಣಿ ಪತ್ರಿಕೆಯಲ್ಲಿ ಈ ಬಗ್ಗೆ ಉಲ್ಲೇಖವಾಗಿತ್ತು.ಇದರ ಸತ್ಯಾಸತ್ಯತೆ ಪ್ರಯೋಗಗಳ ಮೂಲಕ ದೃಢ ಪಡಬೇಕಾಗಿದೆ ಅಷ್ಟೇ.

ವಾಸ್ತವವಾಗಿ ಯಾವುದೇ ಸಸ್ಯಗಳು ಸೂರ್ಯನ ಕಿರಣ, ಪತ್ರಹರಿತ್ತು, ನೀರು ಮತ್ತು ಅಗತ್ಯ ಪೋಷಕಾಂಶಗಳ ಸಹಾಯದಿಂದ ತನಗೆ ಬೇಕಾದ ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳುತ್ತದೆ. ಸಸ್ಯಗಳು ತಮಗೆ ಬೇಕಾದ ಆಹಾರವನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್ ಹೀರಿಕೊಂಡು ಅದನ್ನು ಪಿಷ್ಟಪದಾರ್ಥವನ್ನಾಗಿ ಪರಿವರ್ತಿಸಿ ಆಮ್ಲಜನಕವನ್ನು ಹೊರಸೂಸುತ್ತದೆ.

ಈ ವಾರದ ವಿಕ್ರಮ ಪತ್ರಿಕೆಯಲ್ಲಿ “ಸೀತಾ ಅಶೋಕ” ಮರದ ಕುರಿತು ಬರೆದ ಲೇಖನ ಪ್ರಕಟವಾಗಿದೆ. ಈ ವೃಕ್ಷದ ಕೆಳಗೆ ಕಳಿತರೂ ಸಾಕು ಬಹಳ ಕಾಯಿಲೆಗಳು ಗುಣವಾಗುತ್ತದೆ. ಲೇಖನ ಓದಿ ಇತತರೊಂದಿಗೆ ಹಂಚಿಕೊಳ್ಳಿ ಹಾಗೆ ಈ ಮುಂಗಾರಿನಲ್ಲಿ ಇಂತಹ ಗಿಡಗಳನ್ನು ನೀವು ನೆಡುತ್ತೀರೆಂದು ಆಶಿಸುತ್ತೇನೆ.

- ಕೆಲದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಡಿಕೆ ಮರಗಳು ಜಗತ್ತಿನ ಅತಿ ಹೆಚ್ಚು ಆಮ್ಲಜನಕ ನೀಡುವ ಸಸ್ಯಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ ಮತ್ತು ಹೆಚ್ಚು ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಅಮ್ಲಜನಕದ ಪ್ರಮಾಣವೂ ಹೆಚ್ಚಿರುತ್ತದೆ ಎಂದು ಹೇಳುವ ಸಂದೇಶಗಳು ವಾಟ್ಸಾಪ್ ಮತ್ತು ಫೇಸ್ಬುಕ್ನಲ್ಲಿ ಪ್ರಚಲಿತದಲ್ಲಿದೆ. ಇದಕ್ಕೆ ಮತ್ತಷ್ಟು ಪುಷ್ಟಿ ನೀಡುವಂತೆ ಕಳೆದ ವಾರದ ವಿಜಯವಾಣಿ ಪತ್ರಿಕೆಯಲ್ಲಿ ಈ ಬಗ್ಗೆ ಉಲ್ಲೇಖವಾಗಿತ್ತು.ಇದರ ಸತ್ಯಾಸತ್ಯತೆ ಪ್ರಯೋಗಗಳ ಮೂಲಕ ದೃಢ ಪಡಬೇಕಾಗಿದೆ ಅಷ್ಟೇ.
ವಾಸ್ತವವಾಗಿ ಯಾವುದೇ ಸಸ್ಯಗಳು ಸೂರ್ಯನ ಕಿರಣ, ಪತ್ರಹರಿತ್ತು, ನೀರು ಮತ್ತು ಅಗತ್ಯ ಪೋಷಕಾಂಶಗಳ ಸಹಾಯದಿಂದ ತನಗೆ ಬೇಕಾದ ಆಹಾರವನ್ನು ಉತ್ಪತ್ತಿ ಮಾಡಿಕೊಳ್ಳುತ್ತದೆ. ಸಸ್ಯಗಳು ತಮಗೆ ಬೇಕಾದ ಆಹಾರವನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್ ಹೀರಿಕೊಂಡು ಅದನ್ನು ಪಿಷ್ಟಪದಾರ್ಥವನ್ನಾಗಿ ಪರಿವರ್ತಿಸಿ ಆಮ್ಲಜನಕವನ್ನು ಹೊರಸೂಸುತ್ತದೆ.

ಹಾಗಾದರೆ ಸಸ್ಯಗಳು ಯಾವಾಗಲೂ ಆಮ್ಲಜನಕವನ್ನು ಹೊರಸೂಸುತ್ತವೆಯೇ ಎಂಬ ಪ್ರಶ್ನೆ ಮೂಡಬಹುದು. ಖಂಡಿತವಾಗಿಯೂ ಇಲ್ಲ. ಬಹುತೇಕ ಎಲ್ಲಾ ಸಸ್ಯ ಪ್ರಭೇದಗಳಲ್ಲಿ ಸೂರ್ಯರಶ್ಮಿ ಎಲೆಗಳ ಮೇಲೆ ಬೀಳುವವರೆಗೂ ದ್ಯುತಿ ಸಂಶ್ಲೇಷಣೆ ಕ್ರಿಯೆ ಜರುಗುತ್ತದೆ. ಕತ್ತಲಾದ ನಂತರ ಮುಂಜಾನೆಯಿಂದ ತಯಾರಿಸಿದ ಆಹಾರವನ್ನು ನಿಧಾನವಾಗಿ ಜೀರ್ಣಿಸಿಕೊಳ್ಳಲು ಮುಂದಾಗುತ್ತವೆ. ಈ ಸಮಯದಲ್ಲಿ ನಮ್ಮಂತೆ ಸಸ್ಯಗಳೂ ಸಹ ವಾತಾವರಣದಲ್ಲಿರುವ ಆಮ್ಲಜನಕವನ್ನು ಹೀರಿಕೊಂಡು ಇಂಗಾಲವನ್ನು ಹೊರಸೂಸುತ್ತದೆ. ಬಹುಶಹ ಈ ಕಾರಣಕ್ಕಾಗಿ ನಮ್ಮ ಪೂರ್ವೀಕರು ಸಂಜೆಯಾದ ನಂತರ ಗಿಡಗಳ ಬಳಿ ಹೋಗಬಾರದೆಂಬ ನಿಯಮ ಮಾಡಿರಬೇಕು.

ದ್ಯುತಿ ಸಂಶ್ಲೇಷಣೆ ಮತ್ತು ಆಹಾರ ಪಚನ ಕ್ರಿಯೆಗೆ ಅನುಗುಣವಾಗಿ ಸಸ್ಯಗಳನ್ನು c3, c4 ಮತ್ತು ಕ್ಯಾಮ್ ಎಂದು ವಿಂಗಡಿಸಲಾಗಿದೆ. ಇವುಗಳಲ್ಲಿ c4 ಅತ್ಯಂತ ಪರಿಣಾಮಕಾರಿ ಸಸ್ಯ ಪ್ರಭೇದಗಳೆಂದು ಹೇಳಲಾಗುತ್ತದೆ. ಸಾಮಾನ್ಯವಾಗಿ ದ್ಯುತಿ ಸಂಶ್ಲೇಷಣೆ ಕ್ರಿಯೆ ನಡೆಸಲು ಸೂರ್ಯನ ಕಿರಣಗಳು ಅತಿ ಮುಖ್ಯವಾಗಿರುತ್ತದೆ. ನಮ್ಮ ಕಣ್ಣಿಗೆ ಕಾಣಿಸುವ ಬೆಳಕಿನ ಕಿರಣಗಳ ವೇವ್ ಲೆಂಥ್ 400ರಿಂದ 700ನ್ಯಾನೋ ಮೀಟರ್ ನಷ್ಟಿರುತ್ತದೆ. ಇದೇ ತರಂಗಾಂತರದ ಬೆಳಕಿನಲ್ಲಿ ಸಸ್ಯಗಳು ದ್ಯುತಿ ಸಂಶ್ಲೇಷಣೆ ನಡೆಸುತ್ತವೆ. ನಮ್ಮಲ್ಲಿ ಹೇಗೆ ಮೂಗಿನ ಹೊಳ್ಳೆಗಳ ಮೂಲಕ ಪ್ರಾಣವಾಯು ಪ್ರವೇಶಿಸುತ್ತದೆಯೋ ಅದೇ ರೀತಿ ಸಸ್ಯಗಳಲ್ಲಿ ಸ್ಟೊಮಾಟ (Stomata) ಎನ್ನುವ ಮೂಗಿನ ಹೊಳ್ಳೆಗಳಿಗೆ ಸಮಾನಾದ ಅಂಗವು ಎಲೆಗಳ ಅಂಚಿನಲ್ಲಿರುತ್ತದೆ. ಇದರ ಮೂಲಕ ಗಿಡಗಳು ಉಸಿರಾಡುತ್ತವೆ. ಇದಿಷ್ಟೇ ಅಲ್ಲದೆ ಇನ್ನೂ ಹಲವು ರಂದ್ರಗಳು ಬೇರುಗಳಲ್ಲಿ, ಕಾಂಡದಲ್ಲಿ ಕಂಡುಬರುತ್ತದೆ.

ಈ ಎಲ್ಲಾ ಕ್ರಿಯೆಗಳು ನಡೆಯಲು ನೀರು ಮತ್ತು ಉಷ್ಣಾಂಶವು ಬಹಳ ಮುಖ್ಯ. ಎರಡರಲ್ಲಿ ಯಾವುದಾದರೂ ಏರುಪೇರಾದರೂ ದ್ಯುತಿಸಂಶ್ಲೇಷಣೆ ಮತ್ತು ಆಹಾರ ಪಚನ ಕ್ರಿಯೆ ಸರಿಯಾಗಿ ಆಗುವುದಿಲ್ಲ. ಹೆಚ್ಚು ಹೆಚ್ಚು ಆಹಾರ ಉತ್ಪಾದನೆ ಮಾಡಬೇಕಾದಾ ಗಿಡಗಳು ಸ್ಟೊಮಾಟದ ಬಾಗಿಲನ್ನು ತೆರೆಯಬೇಕು ಹೀಗೆ ಮಾಡುವ ಪ್ರಕ್ರಿಯೆಯಲ್ಲಿ ಸಸ್ಯಗಳ ಬೇರುಗಳು ಭೂಮಿಯಿಂದ ನೀರನ್ನು ಎಳೆದು ಎಲೆಗಳಿಗೆ ಕೊಡಬೇಕು ಎಲೆಗಳಲ್ಲಿ ಸಾಕಷ್ಟು ನೀರಿನ ಪ್ರಮಾಣ ವಿದ್ದರಷ್ಟೇ ಸ್ಟೊಮಾಟ ತೆರೆದುಕೊಳ್ಳುತ್ತದೆ. ಇಲ್ಲವಾದಲ್ ಇಲ್ಲ. ಹಾಗಾಗಿ ಗಿಡಗಳು ಸಹ ತಮಗೆಷ್ಟು ಬೇಕೋ ಅಷ್ಟೇ ಆಹಾರ ಉತ್ಪಾದನೆ ಮಾಡಿಕೊಳ್ಳುತ್ತದೆ ಏಕೆಂದರೆ ಹೆಚ್ಚು ಆಹಾರ ಉತ್ಪಾದನೆ ಮಾಡುವುದರಲ್ಲಿ ಹೆಚ್ಚಿನ ನೀರನ್ನು ಕಳೆದು ಕೊಳ್ಳಬೇಕಾಗುತ್ತದೆ.
ನೀರು ಆಮ್ಲಜನಕವಷ್ಟೇಯಲ್ಲದೆ ಇನ್ನೂ ಹಲವು ಅಂಶಗಳು ಸಸ್ಯಗಳಿಂದ ಹೊರಬರುತ್ತಿರುತ್ತವೆ. ಹಿಂದಿನ ಒಂದು ಲೇಖನದಲ್ಲಿ ಔದುಂಬರ ವೃಕ್ಷದ ಬಗ್ಗೆ ಬರೆಯುತ್ತಾ ಮುಂಜಾವಿನಲ್ಲಿ ಅತ್ತಿಮರದ ಹಲವು ಬಗೆಯ ಉಪಯುಕ್ತ ರಾಸಾಯನಿಕಗಳನ್ನು ಬಿಡುಗಡೆ ಮಾಡುವುದರಿಂದ ಆ ಮರಗಳನ್ನು ಆ ಸಮಯದಲ್ಲಿ ಸುತ್ತು ಹಾಕುವುದರಿಂದ ನಮ್ಮಲ್ಲಿ ಚೈತನ್ಯ ಉಂಟಾಗಿ ಆರೋಗ್ಯ ವೃದ್ಧಿಸುತ್ತದೆ ಎಂಬುದರ ಬಗ್ಗೆ ಎಲ್ಲಪ್ಪ ರೆಡ್ಡಿ ಅವರು ಹೇಳಿದ ಮಾತುಗಳನ್ನು ನಿಮಗೆ ತಿಳಿಸಿದ್ದೆ.

ಇದೇ ರೀತಿ ಅಶೋಕವೃಕ್ಷದ ಬಗ್ಗೆಯೂ ನೀವೆಲ್ಲರೂ ತಿಳಿದುಕೊಳ್ಳಲೇಬೇಕು.

ಸಾಮಾನ್ಯವಾಗಿ ಅಶೋಕ ವೃಕ್ಷವೆಂದಾಕ್ಷಣ ನಮ್ಮೆಲ್ಲರ ಮನಸ್ಸಿಗೆ ಬರುವುದು ರಸ್ತೆಯ ಪಕ್ಕದಲ್ಲಿ ಅಥವಾ ಉದ್ಯಾನವನಗಳಲ್ಲಿ ನೇರವಾಗಿ ಬೆಳೆಯುವ ಮರಗಳು. ಆದರೆ ಅದು ನಿಜವಾದ ಅಶೋಕ ವೃಕ್ಷ ವಲ್ಲ. ನಿಜವಾದ ಅಶೋಕ ವೃಕ್ಷದ ವೈಜ್ಞಾನಿಕ ನಾಮ ಸರಕಾ ಅಶೋಕ. “ಅಶೋಕ” ಎಂದರೆ ಶೋಕವನ್ನು ನಾಶ ಮಾಡುವುದು ಎಂಬ ಅರ್ಥ ಸಂಸ್ಕೃತದಲ್ಲಿದೆ. ಸದಾಕಾಲ ಚಿಗುರುತ್ತಿರುವ ತಾಮ್ರದ ವರ್ಣದ ಎಲೆಗಳನ್ನು ಹೊಂದಿರುವ ಈ ವೃಕ್ಷಕ್ಕೆ ತಾಮ್ರಪರಣಿ ಎನ್ನುವ ಇನ್ನೊಂದು ಹೆಸರು ಇದೆ.

ನನಗೆ ಮೊದಲಿನಿಂದಲೂ ಗಿಡಗಳ ಬಗ್ಗೆ ತಿಳೆದುಕೊಳ್ಳುವ ಆಸಕ್ತಿ. ಅದರಲ್ಲೂ ಪುರಾಣಗಳಲ್ಲಿ ಉಲ್ಲೇಖವಾಗುವ ಮರಗಿಡಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸ್ಥೆ ಬಹಳಷ್ಟಿದೆ. ನನಗೆ ರಾಮಾಯಣದಲ್ಲಿ ಉಲ್ಲೇಖವಾಗುವ ಅಶೋಕ ವನದ ಬಗ್ಗೆ ತಿಳಿಯ ಬೇಕೆನಿಸಿತು. ಶ್ರೀಲಂಕೆಯಲ್ಲಿ ಈಗಲೂ ಸಾಕಷ್ಟು ಅರಣ್ಯ ಪ್ರದೇಶವಿದೆ. ಬಗೆಬಗೆಯ ಮರಗಿಡಗಳಿವೆ. ಇನ್ನು ರಾಮಾಯಣ ಕಾಲದಲ್ಲಿ ಇದಕ್ಕಿಂತಲೂ ದಟ್ಟವಾದ ಕಾಡು ವೈವಿಧ್ಯಮಯ ಸಸ್ಯ ಪ್ರಭೇಧಗಳು ಇದ್ದಿರಬೇಕಲ್ಲವೇ? ಆದರೂ ರಾವಣಾಸುರ ಸೀತಾಮಾತೆಯನ್ನು ಅಶೋಕ ಮರದ ಕೆಳಗೆ ಏಕೆ ಇರಿಸಿದ? ಅರಳಿ, ಆಲ ಬೇವು, ಸಂಪಿಗೆ, ಮಾವು ಅಥವಾ ಇನ್ಯಾವುದೋ ವೃಕ್ಷದ ಕೆಳಗೆ ಏಕೆ ಇರಿಸಲಿಲ್ಲ ಎಂಬ ಸಂದೇಹ ಸದಾ ಕಾಡುತ್ತಿತ್ತು. ಒಮ್ಮೆ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ
ಶತಾವಧಾನಿ ಗಣೇಶರು ತಮ್ಮ ರಾಮಾಯಣದ ಪ್ರವಚನದಲ್ಲಿ ಅಶೋಕ ಮರದ ಬಗ್ಗೆ ಉಲ್ಲೇಖಿಸಿದ್ದರು. ಅಶೋಕ ಮರದಲ್ಲಿ ಕೆಂಪು ಬಣ್ಣದ ಸುಂದರ ಮತ್ತು ಚಿತ್ತಾಕರ್ಷಕ ಹೂ ಗುಚ್ಛಗಳು ಬಿಡುತ್ತವೆ. ಇದನ್ನು ನೋಡಿ ಸೀತೆ ಮೋಹಗೊಂಡು ಮನಸ್ಸು ಬದಲಾಯಿಸಿ ರಾವಣಾಸುರನನ್ನು ವರಿಸಬಹುದೆಂಬ ಆಸೆಯಿಂದ ರಾವಣ ಹೀಗೆ ಮಾಡಿದನೆಂದು ಹೇಳಿದರು.

ಅದೇ ದಿನ ಸಂಜೆ ಮನೆಗೆ ಬಂದ ನಂತರ ನಾನು ಅಶೋಕ ಮರದ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಗೂಗಲ್ ಮುಖಾಂತರ ಕಲೆಹಾಕಿದೆ.

ವಿಶೇಷವೆಂದರೆ ಅಶೋಕ ಮರವು ಆಯುರ್ವೇದದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿರುವಂತಹ ಮರ. ಸ್ತ್ರೀ ರೋಗಗಳಿಗೆ ಇದು ರಾಮಬಾಣ. ಅಶೋಕಾರಿಷ್ಟವೆನ್ನುವ ಔಷಧವು ಸ್ತ್ರೀ-ರೋಗ ನಿವಾರಣೆಯಲ್ಲಿ ಬಹಳ ಪ್ರಾಮುಖ್ಯತೆ ವಹಿಸುತ್ತದೆ ಎಂದು ತಿಳಿಯಿತು. ಇವೆಲ್ಲಕ್ಕೂ ಮೀರಿ ಬಹಳ ಆಶ್ಚರ್ಯಕರ ಸಂಗತಿ ತಿಳಿದಿದ್ದೇನೆಂದರೆ ಕೇವಲ ಈ ಗಿಡದ ಕೆಳಗೆ ಕೂರುವುದರಿಂದ ಅಥವಾ ನಡೆದಾಡುವುದರಿಂದ ಸ್ತ್ರೀಯರಲ್ಲಿ ಕಂಡುಬರುವ ಅನೇಕ ರೋಗಗಳು ಶಮನವಾಗುತ್ತದೆ ಎಂಬ ವರದಿಗಳನ್ನು ಪ್ಲಾನೆಟ್ ಆಯೂರ್ವೆದ ಸಂಸ್ಥೆಯ ಡಾ ವಿಕ್ರಮ್ ಚೌಹಾಣ್ ತಿಳಿಸಿರುತ್ತಾರೆ.

ವಿಪ್ರಯಾಸವೆಂದರೆ ಅಶೋಕವೃಕ್ಷದ ಉಪಯೋಗಗಳನ್ನು ತಿಳಿದುಕೊಂಡ ನಂತರ ಅನೇಕರು ಈ ವೃಕ್ಷವನ್ನು ಅರಣ್ಯಗಳಿಂದ ಮಿತಿಮೀರಿ ಕಡಿದು ಬರಿದು ಮಾಡಿರುತ್ತಾರೆ. ಇದರ ಪರಿಣಾಮವಾಗಿ ಅಶೋಕ ವೃಕ್ಷವು ಅಳಿವಿನಂಚಿಗೆ ಬಂದಿದ್ದು ಕೆಲವೇ ಕೆಲವು ಗಿಡಗಳು ಮಾತ್ರವಿದೆ.

ಇಂತಹ ಗಿಡಗಳನ್ನು ಉಳಿಸಿ ಬೆಳೆಸಬೇಕಾದ ಅನಿವಾರ್ಯತೆಯಿದೆ. ನಮ್ಮ ತೋಟದಲ್ಲೂ ಒಂದು ಅಶೋಕ ಗಿಡ ನೆಟ್ಟಿದ್ದೇನೆ ಮತ್ತು ತೋಟ ನೋಡಲು ಬರುವ ಎಲ್ಲರಿಗೂ ಈ ಗಿಡವನ್ನು ತೋರಿಸಿ ಅದರ ಮಹತ್ವವನ್ನು ಹೇಳಿ ತಾವು ಒಂದೆರಡು ಗಿಡಗಳನ್ನು ನೆಡಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಉಜಿರೆಯ ಶ್ರೀಮತಿ ಪೂರ್ಣಿಮಾ Poornima K Kamila ರವರು ಅಶೋಕ ಮರದ ಹೂವುಗಳನ್ನು ಬಳಸಿ ಚಟ್ನಿ ತಂಬುಳಿ ಗೊಜ್ಜು ಮಾಡಿರುವುದನ್ನು ನೋಡಿದ್ದೇನೆ.

ಗೋಪಾಲ್ಸ್ ತಂಡದ ವತಿಯಿಂದ ಬೆಂಗಳೂರಿನ ಕೆಲವು ಉದ್ಯಾನವನಗಳಲ್ಲಿ ಮತ್ತು ಅನೇಕ ಗೋಶಾಲೆಗಳಲ್ಲಿ ನೂರಕ್ಕೂ ಹೆಚ್ಚು ಅಶೋಕ ಗಿಡಗಳನ್ನು ಈಗಾಗಲೇ ನೆಟ್ಟಿರುತ್ತೇವೆ. ಇದಿಷ್ಟೇ ಅಲ್ಲದೆ ನಮ್ಮ ಪೂರ್ವಿಕರು ಪ್ರತಿಯೊಂದು ಗ್ರಹ, ರಾಶಿ ಮತ್ತು ನಕ್ಷತ್ರಕ್ಕೂ ಒಂದೊಂದು ವಿಶೇಷವಾದ ಗಿಡಗಳನ್ನು ಸೂಚಿಸಿರುತ್ತಾರೆ. ಇವುಗಳೆಲ್ಲವೂ ಪರಿಸರದಲ್ಲಿ ಸಮತೋಲನ ಕಾಪಾಡುವಂತಹ ಸಾಮರ್ಥ್ಯ ಹೊಂದಿರುವಂಥದ್ದು ಮತ್ತು ಔಷಧೀಯ ಗುಣಗಳ ಆಗರ ಆಗಿರುವಂತಹ ಸಸ್ಯಗಳು.

ಇನ್ನೇನು ಮಳೆಗಾಲ ಪ್ರಾರಂಭವಾಗಲಿದೆ. ವೃಕ್ಷಾಯುರ್ವೇದದ ಪ್ರಕಾರ ಯಾವ ಗಿಡಗಳನ್ನು ನೆಟ್ಟರೆ ಯಾವ ಪುಣ್ಯ ಲಭಿಸುತ್ತದೆ ಎಂಬುದನ್ನು ಈ ಹಿಂದಿನ ಲೇಖನದಲ್ಲಿ ವಿವರಿಸಿದ್ದೇನೆ. ಆಲದ ಜಾತಿಯ ಮರಗಳನ್ನು ಬೆಳೆಸುವುದರಿಂದ ಪ್ರಕೃತಿಯಲ್ಲಿ ಸಮತೋಲನ ಹೇಗೆ ಕಾಪಾಡಬಹುದು ಎಂದು ಅತ್ತಿ ಮರದ ಕುರಿತಾದ ಲೇಖನದಲ್ಲಿ ವಿವರಣೆ ನೀಡಲಾಗಿದೆ. ಇನ್ನು ತಡ ಮಾಡದೆ ಲಾಕ್ಡೌನ್ ಮುಗಿದನಂತರ ಇಂತಹ ಗಿಡಗಳನ್ನು ನಮ್ಮ ಸಮೀಪದ ದೇವಸ್ಥಾನ,
ಉದ್ಯಾನವನಗಳಲ್ಲಿ, ಆಸ್ಪತ್ರೆ, ಶಾಲಾ-ಕಾಲೇಜು ಕಚೇರಿಗಳ ಆವರಣದಲ್ಲಿ ವಿಶೇಷವಾಗಿ ಮಹಿಳೆಯರು ಸಂಚರಿಸುವ ಜಾಗದಲ್ಲಿ ಅಶೋಕ ಮರದ ಸಸಿಗಳನ್ನು ನೆಡುತ್ತೀರೆಂದು ಆಶಿಸುತ್ತೇನೆ.

ಸಂದೀಪ್ ಮಂಜುನಾಥ್
ಎಂ.ಎಸ್ಸಿ.ಕೃಷಿ
ಹುಣಸೂರು